# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 684 |
| ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 21-02-2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | **ಬಳ್ಳಾರಿ ಜಿಲ್ಲೆಯಲ್ಲಿ 2018 ರಲ್ಲಿ ಘೋಷಣೆ ಮಾಡಿದ ಕೊಟ್ಟೂರು, ಕಂಪ್ಲಿ, ಮತ್ತು ಕುರುಗೋಡು ತಾಲ್ಲೂಕು ಕೇಂದ್ರಗಳಿಗೆ ಎಲ್ಲಾ ಸರ್ಕಾರಿ ಕಛೇರಿಗಳನ್ನು ಆರಂಭಿಸಲಾಗಿದೆಯೇ;<br>ಹಾಗಿದ್ದಲ್ಲಿ, ಇವುಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಛೇರಿಗಳು ಯಾವುವು; ಅವುಗಳಿಗೆ ಸ್ವಂತ ಕಟ್ಟಡಗಳನ್ನು ಕಟ್ಟಲಾಗಿದೆಯೇ;<br>ಇಲ್ಲವಾದಲ್ಲಿ ಕಟ್ಟಡಗಳ ಕಾಮಗಾರಿಗಳು ಯಾವ ಹಂತದಲ್ಲಿವೇ; (ಸಂಪೂರ್ಣ ಮಾಹಿತಿ ನೀಡುವುದು)** | ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 101 ಭೂದಾಪು 2017, ದಿನಾಂಕ: 11-01-2018 ರಲ್ಲಿ ಬಳ್ಳಾರಿ ಜಿಲ್ಲೆಯ ಕೊಟ್ಟೂರನ್ನು ನೂತನ ತಾಲೂಕನ್ನಾಗಿ ರಚಿಸಿ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಅಧಿಸೂಚನೆಯು ದಿನಾಂಕ: 11-01-2018 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ.<br>ಕೊಟ್ಟೂರು ನೂತನ ತಾಲ್ಲೂಕಿನಲ್ಲಿ ಪ್ರಸ್ತುತ ಈ ಕೆಳಕಂಡ ಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ.<br>• ತಹಸೀಲ್ದಾರ್ ಕಚೇರಿ<br>• ತಾಲ್ಲೂಕು ಪಂಚಾಯತ್ ಕಚೇರಿ<br>• ಪೊಲೀಸ್ ಠಾಣೆ.<br>• ಉಪ ಖಜಾನೆ<br>• ಪಶು ವೈದ್ಯಾಧಿಕಾರಿ ಕಚೇರಿ<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 102 ಭೂದಾಪು 2017, ದಿನಾಂಕ:22-01-2018 ರಲ್ಲಿ ಬಳ್ಳಾರಿ ಜಿಲ್ಲೆಯ ಕಂಪ್ಲಿಯನ್ನು ನೂತನ ತಾಲೂಕನ್ನಾಗಿ ರಚಿಸಿ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಅಧಿಸೂಚನೆಯು ದಿನಾಂಕ: 22-01-2018 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ.<br><br>ಕಂಪ್ಲಿ ನೂತನ ತಾಲ್ಲೂಕಿನಲ್ಲಿ ಪ್ರಸ್ತುತ ಈ ಕೆಳಕಂಡ ಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ.<br>• ತಹಸೀಲ್ದಾರ್ ಕಚೇರಿ<br>• ತಾಲ್ಲೂಕು ಪಂಚಾಯಿತಿ ಕಚೇರಿ<br>• ಪೊಲೀಸ್ ಠಾಣೆ<br>• ಉಪ ಖಜಾನೆ |



File No. RD/24/LRD/2024-RD_SSLR-REVENUE DEPATMENT SEC (Computer No. 1325009)

- ಎ.ಪಿ.ಎಂ.ಸಿ
- ಪಶುಸಂಗೋಪನೆ ಇಲಾಖೆ
- ಅಗ್ನಿ ಶಾಮಕ ಕಚೇರಿ
- ಜೆಸ್ಕಾಂ ಕಚೇರಿ
- ಉಪ ನೋಂದಣಿ ಕಚೇರಿ
- ಶಿಶು ಅಭಿವೃದ್ಧಿ ಇಲಾಖೆ ,
- ಕೃಷಿ ಇಲಾಖೆ,
- ತೋಟಗಾರಿಕೆ ಇಲಾಖೆ,
- ಅರಣ್ಯ ಇಲಾಖೆ,
- ತಾಲ್ಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
- ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ
- ಸಿ.ಡಿ.ಪಿ.ಓ, ಬಿ.ಸಿ.ಎಂ. ಕಛೇರಿ,

ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 100 ಭೂದಾಪು 2017, ದಿನಾಂಕ:11-01-2018 ರಲ್ಲಿ ಬಳ್ಳಾರಿ ಜಿಲ್ಲೆಯ ಕುರಗೋಡನ್ನು ನೂತನ ತಾಲೂಕನ್ನಾಗಿ ರಚಿಸಿ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಅಧಿಸೂಚನೆಯು ದಿನಾಂಕ: 11-01-2018 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ.

ಕುರುಗೋಡು ನೂತನ ತಾಲ್ಲೂಕಿನಲ್ಲಿ ಪ್ರಸ್ತುತ ಈ ಕೆಳಕಂಡ ಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ.

- ತಹಸೀಲ್ದಾರ್ ಕಚೇರಿ,
- ತಾಲ್ಲೂಕು ಪಂಚಾಯತಿ ಕಚೇರಿ,
- ಪೊಲೀಸ್ ಠಾಣೆ,
- ಉಪ ಖಜಾನೆ,
- ಎ.ಪಿ.ಎಂ.ಸಿ
- ಪಶುವೈದ್ಯಾಧಿಕಾರಿಗಳ ಕಚೇರಿ,
- ಅಗ್ನಿ ಶಾಮಕ ಠಾಣೆ,
- ಜೆಸ್ಕಾಂ ಕಚೇರಿ,
- ಉಪ ನೋಂದಣಿ ಕಛೇರಿ,
- ಶಿಶು ಅಭಿವೃದ್ಧಿ ಇಲಾಖೆ,
- ಕೃಷಿ ಇಲಾಖೆ,
- ತೋಟಗಾರಿಕೆ ಇಲಾಖೆ,
- ಅರಣ್ಯ ಇಲಾಖೆ,
- ತಾಲ್ಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
- ಕ್ಷೇತ್ರ ಶಿಕ್ಷಣಾಧಿಕಾರಿಗಳ ಇಲಾಖೆ,
- ಸಿ.ಡಿ.ಪಿ.ಓ. ಬಿ.ಸಿ.ಎಂ. ಕಛೇರಿ,



File No. RD/24/LRD/2024-RD_SSLR-REVENUE DEPATMENT SEC (Computer No. 1325009)

| | | |
|---|---|---|
| | | ಮುಂದುವರಿದು ನೂತನ ತಾಲ್ಲೂಕುಗಳಲ್ಲಿ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಕಚೇರಿಗಳನ್ನು ಪ್ರಾರಂಭಿಸಲು ಅನುವಾಗುವಂತೆ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಅಗತ್ಯ ಸಂಖ್ಯೆಯ ಹುದ್ದೆಗಳನ್ನು ಮಂಜೂರು ಮಾಡಿ ಕಚೇರಿಗಳನ್ನು ಪ್ರಾರಂಭಿಸುವಂತೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಂದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಲಾಗಿದೆ.<br>ಕಂಪ್ಲಿ ಮತ್ತು ಕುರುಗೋಡು ನೂತನ ತಾಲ್ಲೂಕಿನ 'ತಾಲ್ಲೂಕು ಆಡಳಿತ ಸೌಧ' ಕಟ್ಟಡ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಮುಕ್ತಾಯದ ಹಂತದಲ್ಲಿದೆ. |
| ಆ) | ಕೊಟ್ಟೂರು ತಾಲ್ಲೂಕು ಕೇಂದ್ರಕ್ಕೆ ತಾಲ್ಲೂಕು ಆಡಳಿತ ಭವನವನ್ನು ನಿರ್ಮಿಸಲಾಗಿದೆಯೇ;<br>ಇಲ್ಲದಿದ್ದಲ್ಲಿ, ಯಾವ ಕಾರಣಕ್ಕೆ ಕಟ್ಟಡವನ್ನು ಕಟ್ಟಲಾಗಿಲ್ಲ; ಯಾವ ಕಾಲಮಿತಿಯಲ್ಲಿ ಕಟ್ಟಡದ ಕಾಮಗಾರಿಗೆ ಚಾಲನೆ ನೀಡಲಾಗುವುದು; | ಕೊಟ್ಟೂರು ತಾಲ್ಲೂಕು ಆಡಳಿತ ಭವನದ ನಿರ್ಮಾಣಕ್ಕಾಗಿ ಕೊಟ್ಟೂರು ಪಟ್ಟಣದ ಸರ್ವೆ ನಂ. 732/ಎ ರಲ್ಲಿ 1.86 ಎಕರೆ ಹಾಗೂ ಸರ್ವೆ ನಂ. 733/ಎ ರಲ್ಲಿ 0.75 ಎಕರೆ ಸೇರಿದಂತೆ ಒಟ್ಟು 2.61 ಎಕರೆ ಜಮೀನನ್ನು ಕಾಯ್ದಿರಿಸಲಾಗಿದೆ. ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಸ್ವೀಕೃತವಾದಲ್ಲಿ ಪರಿಶೀಲಿಸಿ ಕ್ರಮ ವಹಿಸಲಾಗುವುದು. |
| ಇ) | ಕೊಟ್ಟೂರು ತಾಲ್ಲೂಕು ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾಲ್ಲೂಕು ಮಟ್ಟದ ಸರ್ಕಾರಿ ಕಛೇರಿಗಳ ವಿವರಗಳನ್ನು ಒದಗಿಸುವುದು? | ಕೊಟ್ಟೂರು ನೂತನ ತಾಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಚೇರಿಗಳ ವಿವರವನ್ನು ಪ್ರಶ್ನೆ ಸಂಖ್ಯೆ (ಅ) ರಲ್ಲಿ ನೀಡಿದೆ. |

**ಸಂಖ್ಯೆ: ಕಂಇ 24 ಎಲ್‌ಆರ್‌ಡಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು



File No. RD/24/LRD/2024-RD_SSLR-REVENUE DEPATMENT SEC (Computer No. 1325009)